


# ಒಂದು ಮರದ ದಿಮ್ಮಿ ಮನೆ!



ಕ್ಯಾಲಿಫೋರ್ನಿಯಾದ ಗಾರ್ಬರ್ವಿಲ್ಲೆಯಲ್ಲಿ ಒಂದು ಮನೆ ಇದೆ. ಇದು ಇಟ್ಟಿಗೆಗಳು ಸಿಮೆಂಟ್ ಬಳಸಿ ನಾವು ಕಟ್ಟಿಸುವಂತಹ ಸಾಮಾನ್ಯ ಮನೆ ಅಲ್ಲವೇ ಅಲ್ಲ. ಬದಲಾಗಿ ಒಂದೇ ಒಂದು ಮರದ ದಿಮ್ಮಿ(ಲಾಗ್)ಯಿಂದ ನಿರ್ಮಿಸಿರುವಂತಹ ವಿಶಿಷ್ಟವಾದ ಮನೆ.

ಈ ಮನೆಯನ್ನು 1946 ರಲ್ಲಿ 2100 ವರ್ಷಗಳಿಗಿಂತಲೂ ಹೆಚ್ಚು ವರ್ಷ ಹಳೆಯದಾದ ರೆಡ್‌ವುಡ್ ಮರದ ತೊಲೆಯಿಂದ ಮಾಡಲಾಗಿದೆ. ದೊಡ್ಡ ಗಾತ್ರದಲ್ಲಿದ್ದು ಸುಮಾರು 42 ಟನ್ ಭಾರವಿದ್ದ ದಿಮ್ಮಿಯ ಒಳಭಾಗವನ್ನು ಕೊರೆದು ತೆಗೆಯಲು ಇಬ್ಬರು ಬಡಗಿಗಳು ಎಂಟು ತಿಂಗಳುಗಳ ಕಾಲ ಶ್ರಮಿಸಿದರಂತೆ. ಈ ಮನೆಯು 13 ಅಡಿ ವ್ಯಾಸ 32 ಅಡಿಗಳಷ್ಟು ಉದ್ದವಾಗಿದ್ದು 7 ಅಡಿ ಸೀಲಿಂಗ್ ಅನ್ನು ಹೊಂದಿದೆ. ಇದರಲ್ಲಿ ಪುಟ್ಟದಾಗಿದ್ದರೂ ಆರಾಮದಾಯಕ ಅಡುಗೆ ಮನೆ, ಊಟದ ಕೋಣೆ, ಮಲಗುವ ಕೋಣೆ ಹಾಗೂ ವಾಸದ ಕೊಠಡಿ (ಲಿವಿಂಗ್ ರೂಂ) ಗಳಿವೆ. ಎರಡು ಹಾಸಿಗೆಗಳು, ಮರದ ದಿಮ್ಮಿಯಲ್ಲೇ ಕೆತ್ತಿರುವ ಶೇಖರಣೆ (ಸ್ಟೋರೇಜ್) ಕ್ಯಾಬಿನೆಟ್‌ಗಳು ಮತ್ತು ಕುರ್ಚಿಗಳೊಂದಿಗಿರುವ ಊಟದ ಮೇಜು, ಹಳೆಯ ಪುಸ್ತಕಗಳು, ಫೋಟೊ ಮುಂತಾದವುಗಳನ್ನು ಹೊಂದಿದೆ.

ಸ್ಥಳಾವಕಾಶದ ಸಮರ್ಥ ಬಳಕೆಯನ್ನು ನಾವಿಲ್ಲಿ ನೋಡಬಹುದಾಗಿದೆ. 'ಒನ್ ಲಾಗ್ ಹೌಸ್' ಎಂದೇ ಕರೆಸಿಕೊಳ್ಳುವ ಈ ಮನೆಯು ವಾಸ್ತವವಾಗಿ ಚಕ್ರಗಳ ಮೇಲಿದೆ. ದೇಶಾದ್ಯಂತ ಸಂಚಾರ ಮಾಡಬೇಕೆಂಬುದು ಇದರ ಉದ್ದೇಶವಾಗಿತ್ತು. ಆರಂಭಿಕ ವರ್ಷಗಳಲ್ಲಿ ಹಲವಾರು ದೇಶಗಳನ್ನು ಸುತ್ತಿ 1999 ರಲ್ಲಿ ಗಾರ್ಬರ್ವಿಲ್ಲೆಗೆ ಬಂದು ಅಂತಿಮವಾಗಿ ಇಲ್ಲೇ ನೆಲೆಯೂರಿದೆ. ಯುರೇಕಾದಿಂದ ಸ್ಯಾನ್‌ಫ್ರಾನ್ಸಿಸ್ಕೊಗೆ ಹೋಗುವಾಗ ಹೆದ್ದಾರಿ 101 ರಲ್ಲಿ 'ಒನ್ ಲಾಗ್ ಹೌಸ್' ಅನ್ನು ನೋಡಬಹುದಾಗಿದೆ. ಇದೊಂದು ಪ್ರವಾಸಿ ಆಕರ್ಷಣೆಯಾಗಿದ್ದು ಒಬ್ಬರಿಗೆ ಒಂದು ಡಾಲರ್‌ನಂತೆ ಪ್ರವೇಶ ಧನ ನೀಡಿ ಈ ಮನೆಯನ್ನು ವೀಕ್ಷಿಸಬಹುದಾಗಿದೆ.

■ ವಿದ್ಯಾ ವಿ. ಹಾಲಭಾವಿ